# ॥ ಕನ್ನಡ ಕವಿಗಳ ಆಧ್ಯಾತ್ಮಿಕ ಪದ್ಯಗಳು ॥

॥೧॥

## ॥ ಕರುಣಾಳು ಬಾ ಬೆಳಕೆ ॥ – ಬಿ. ಎಂ. ಶ್ರೀಕಂಠಯ್ಯ

ಕರುಣಾಳು ಬಾ ಬೆಳಕೆ ಮುಸುಕಿದೀ ಮಬ್ಬಿನಲಿ ಕೈ ಹಿಡಿದು ನಡೆಸೆನ್ನನು ।
ಇರುಳು ಕತ್ತಲೆಯ ಗವಿ ಮನೆ ದೂರ ಕನಿಕರಿಸಿ ಕೈ ಹಿಡಿದು ನಡೆಸೆನ್ನನು ॥

ಹೇಳಿ ನನ್ನಡಿ ಇಡಿಸು ಬಲುದೂರ ನೋಟವನು ಕೇಳಿದೊಡನೆಯೆ, ಸಾಕು ನನಗೊಂದು ಹೆಜ್ಜೆ ।
ಮುನ್ನ ಇಂತಿರದಾದೆ ನಿನ್ನ ಬೇಡದೆ ಹೋದೆ, ಕೈ ಹಿಡಿದು ನಡೆಸೆನ್ನನು ॥೧॥

ನನ್ನ ದಾರಿಯ ನಾನೇ ನೋಡಿ ಹಿಡಿದೆನು ಇನ್ನು ಮುಂದೆ ಕೈ ಹಿಡಿದು ನಡೆಸು ನೀನು ।
ಮಿರುಗು ಬಣ್ಣಕೆ ಬೆರೆತು ಭಯ ಮರೆತು ಕೊಬ್ಬಿದೆನು, ಮೆರೆದಾಯ್ತು ನೆನೆಯದಿರು ಹಿಂದಿನದನೆಲ್ಲ ॥೨॥

ಇಷ್ಟು ದಿನ ಸಲಹಿರುವೆ ಈ ಮೂರ್ಖನನು ನೀನು, ಮುಂದೆಯೂ ಕೈ ಹಿಡಿದು ನಡೆಸದಿಹೆಯಾ ।
ಕಷ್ಟದಡವಿಯ ಕಳೆದು ಬೆಟ್ಟ ಹೊಳೆಗಳ ಹಾದು, ಇರುಳನ್ನು ನೂಕದಿಹೆಯಾ ।
ಬೆಳಗಾಗ ಹೊಳೆಯದೆ ಹಿಂದೊಮ್ಮೆ ನಾನೊಲಿದು ಈ ನಡುವೆ ಕಳಕೊಂಡ ದಿವ್ಯ ಮುಖ ನಗುತಾ ॥೩॥

॥೨॥

## ॥ ಬಾ ಸವಿತಾ ॥ – ಮಾಸ್ತಿ ವೆಂಕಟೇಶ ಅಯ್ಯಂಗಾರ್ಯ

ಬಾ ಸವಿತಾ, ಬಾ ಸವಿತಾ, ಬಾ ಸವಿತಾ ।

ಒಳಗಿನ ಕಣ್ಣನು ಮುಚ್ಚಿಸಿ ಒಮ್ಮೆ ತಿಳಿವಿಗೆ ಬಣ್ಣವ ಹಚ್ಚಿಸಿ ಒಮ್ಮೆ ।
ಒಳಿತಲ್ಲದುದೆ ಒಳಿತೆಂಬುದರ ಚಳಕವೆಲ್ಲಕೆ ವಿನಾಶವ ತಾ ॥೧॥

ನೆಲೆಯಿಂದ ಹೊರಟು ಅಲೆ ಅಲೆ ಅಲೆ ಅಲೆ ಛಲ ತೊಟ್ಟ ಮಲ್ಲ ವಾಹಿನಿ ಬಾ ।
ನಿಲವಿಲ್ಲ ಜಗದಿ ಕತ್ತಲೆಗೆಂದು ಗೆಲುವನು ಸಾರುವ ಭಾಸವ ತಾ ॥೨॥

ಓಂ ತತ್ಸವಿತುರ್ವರೇಣ್ಯವೆಂಬೆವು ಅಂತಲ್ಲದೆ ಬೇರೆಯದನು ನಂಬೆವು ।
ಪಂಥವ ಬೆಳಗಿಸಿ ನಿರೂಪಿಸಿ ಕಾಂಬೆವು ಶಾಂತ ಸುಂದರ ಶಿವದಾ ಸವಿತಾ ॥೩॥

॥೩॥

## ॥ ದೀಪವು ನಿನ್ನದೆ ಗಾಳಿಯು ನಿನ್ನದೆ ॥ – ಕೆ. ಎಸ್. ನರಸಿಂಹಸ್ವಾಮಿ

ದೀಪವು ನಿನ್ನದೆ ಗಾಳಿಯು ನಿನ್ನದೆ, ಆರದಿರಲಿ ಬೆಳಕು ।
ಕಡಲೂ ನಿನ್ನದೆ ಹಡಗೂ ನಿನ್ನದೆ, ಮುಳುಗದಿರಲಿ ಬದುಕು ॥

ಬೆಟ್ಟವು ನಿನ್ನದೆ ಬಯಲು ನಿನ್ನದೆ, ಹಬ್ಬಿ ನಗಲಿ ಪ್ರೀತಿ ।
ನೆರಳು ಬಿಸಿಲು ಎಲ್ಲವೂ ನಿನ್ನದೆ, ಇರಲಿ ಏಕ ರೀತಿ ॥೧॥

ಆಗೊಂದು ಸಿಡಿಲು ಈಗೊಂದು ಮುಗಿಲು ನಿನಗೆ ಅಲಂಕಾರ ।
ಅಲ್ಲೊಂದು ಹಕ್ಕಿ ಇಲ್ಲೊಂದು ಮುಗುಳು ನಿನಗೆ ನಮಸ್ಕಾರ ॥೨॥

ಅಲ್ಲಿ ರಣದುಂದುಭಿ ಇಲ್ಲೊಂದು ವೀಣೆ ನಿನ್ನ ಪ್ರತಿಧ್ವನಿ । ಆ ಮಹಾಕಾವ್ಯ ಈ ಭಾವಗೀತೆ ನಿನ್ನ ಪದಧ್ವನಿ ॥೩॥

॥೪॥

## ॥ ಯಾವ ಮೋಹನ ಮುರಳಿ ಕರೆಯಿತು ॥ – ಗೋಪಾಲಕೃಷ್ಣ ಅಡಿಗ

ಯಾವ ಮೋಹನ ಮುರಳಿ ಕರೆಯಿತು ದೂರ ತೀರಕೆ ನಿನ್ನನು ।
ಯಾವ ವೃಂದಾವನವು ಸೆಳೆಯಿತು ನಿನ್ನ ಮಿಂಚಿನ ಕಣ್ಣನು ॥

ಹೂವು ಹಾಸಿಗೆ ಚಂದ್ರ ಚಂದನ ಬಾಹು ಬಂಧನ ಚುಂಬನ ।
ಬಯಕೆ ತೋಟದ ಬೇಲಿಯೊಳಗೆ ಕರಣಗಳದೀ ರಿಂಗಣ ॥೧॥

ಸಪ್ತ ಸಾಗರದಾಚೆ ಎಲ್ಲೋ ಸುಪ್ತ ಸಾಗರ ಕಾದಿದೆ ।
ಮೊಳೆಯದಲೆಗಳ ಮೂಕಮರ್ಮರ ಇಂದು ಇಲ್ಲಿಗು ಹಾಯಿತೇ ॥೨॥

ವಿವಶವಾಯಿತು ಪ್ರಾಣ ಹಾ! ಪರವಶವು ನಿನ್ನೀ ಚೇತನ ।
ಇರುವುದೆಲ್ಲವ ಬಿಟ್ಟು ಇರದುದರೆಡೆಗೆ ತುಡಿವುದೆ ಜೀವನ ॥೩॥

॥೫॥

## ॥ ನೀ ಸಿಗದೇ ಬಾಳೊಂದು ಬಾಳೇ ॥ – ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟ

ನೀ ಸಿಗದೇ ಬಾಳೊಂದು ಬಾಳೇ, ಕೃಷ್ಣಾ ।
ನಾ ತಾಳಲಾರೆ ಈ ವಿರಹ, ಕೃಷ್ಣ ॥

ಕಮಲವಿಲ್ಲದ ಕೆರೆ ನನ್ನ ಬಾಳು ಚಂದ್ರನಿಲ್ಲದ ರಾತ್ರಿ ಬೀಳು ।
ನೀ ಸಿಗದೆ ಉರಿಉರಿ ಕಳೆದೆ ಇರುಳ ಮಾತಿಲ್ಲ ಬಿಗಿದಿದೆ ದುಃಖ ಕೊರಳ ॥೧॥

ಅನ್ನ ಸೇರದು ನಿದ್ದೆ ಬಂದುದೆಂದು ಕುದಿವೆ ಒಂದೇ ಸಮ ಕೃಷ್ಣಾ ಎಂದು ।
ಯಾರು ಅರಿವರು ಹೇಳು ನನ್ನ ನೋವ ತಲ್ಲಣಿಸಿ ಕೂಗುತಿದೆ ದಾಸಿ ಜೀವ ॥೨॥

ಒಳಗಿರುವ ಗಿರಿಧರನೆ ಹೊರಗೆ ಬಾರೊ ಕಣ್ಣೆದುರು ನಿಂತು ಆ ರೂಪ ತೋರೊ ।
ಜನುಮಜನುಮದ ರಾಗ ನನ್ನ ಪ್ರೀತಿ ನಿನ್ನೊಳಗೆ ಹರಿವುದೇ ಅದರ ರೀತಿ ॥೩॥

॥೬॥

## ॥ ಎಲ್ಲೋ ಹುಟ್ಟಿ ಎಲ್ಲೋ ಬೆಳೆದು ॥ – ಚಂದ್ರಶೇಖರ ಪಾಟೀಲ

ಎಲ್ಲೋ ಹುಟ್ಟಿ ಎಲ್ಲೋ ಬೆಳೆದು ಒಳಗೊಳಗೆ ಹರಿಯುವವಳು ।
ಜೀವ ಹಿಂಡಿ ಹಿಪ್ಪೆ ಮಾಡಿ ಒಳಗೊಳಗೆ ಕೊರೆಯುವವಳು । ಸದಾ ಗುಪ್ತಗಾಮಿನೀ, ನನ್ನ ಶಾಲ್ಮಲಾ ॥

ಹಸಿರು ಮುರಿವ ಎಲೆಗಳಲ್ಲಿ ಬಸಿರ ಬಯಕೆ ಒಸರುವವಳು ।
ತುಟಿ ಬಿರಿಯುವ ಹೂಗಳಲ್ಲಿ ಬೆಂಕಿ ಹಾಡು ಉಸುರುವವಳು । ಸದಾ ತಪ್ತಕಾಮಿನೀ, ನನ್ನ ಶಾಲ್ಮಲಾ ॥೧॥

ಭೂಗರ್ಭದ ಮೌನದಲ್ಲಿ ಧುಮ್ಮೆನುತ ಬಳುಕುವವಳು ।
ಅರಿವಿಲ್ಲದೆ ಮೈಯ ತುಂಬಿ ಕನಸಿನಲ್ಲಿ ತುಳುಕುವವಳು । ಸದಾ ಸುಪ್ತಮೋಹಿನೀ, ನನ್ನ ಶಾಲ್ಮಲಾ ॥೨॥

ನನ್ನ ಬದುಕ ಭುವನೇಶ್ವರಿ ನನ್ನ ಶಾಲ್ಮಲಾ । ನನ್ನ ಹೃದಯ ರಾಜೇಶ್ವರಿ ನನ್ನ ಶಾಲ್ಮಲಾ ।
ಸದಾ ಗುಪ್ತಗಾಮಿನೀ, ನನ್ನ ಶಾಲ್ಮಲಾ ॥೩॥

||೭||

## || ದೇವರೆ ಅಗಾಧ ನಿನ್ನ ಕರುಣೆಯ ಕಡಲು || – ಬಿ. ಆರ್. ಲಕ್ಷ್ಮಣರಾಯ

ದೇವರೆ ಅಗಾಧ ನಿನ್ನ ಕರುಣೆಯ ಕಡಲು ।
ನನಗೆ ಸಾಧ್ಯವೆ ಅದರ ಆಳವಳೆಯಲು ॥

ತೋಳಕೊಂದು ಕುರಿಯ ಕೊಟ್ಟೆ ಸಿಂಹಕೆಂದು ಜಿಂಕೆ ಇಟ್ಟೆ
ನರನಿಗೆ ನರನನ್ನೆ ಬಿಟ್ಟೆ ಬೇಟೆಯಾಡಲು ।
ತುಳಿತಕೆ ನೀ ತಿಮಿರು ಕೊಟ್ಟೆ ತುಡಿತಕೆ ಬರಿ ಬೆವರು ಕೊಟ್ಟೆ
ಕವಿಗೆ ನುಡಿಯ ಢಮರು ಕೊಟ್ಟೆ ಬಡಿದು ದಣಿಯಲು ||೧||

ನರನಿಗೆಂದೆ ನಗೆಯ ಕೊಟ್ಟೆ ನಗೆಯೊಳು ಹಲಬಗೆಯನಿಟ್ಟೆ
ನೂರು ನೋವ ಬಿಟ್ಟೆ ಒಂದು ನಗೆಯ ಕಾಣಲು ।
ಏರಲೊಂದು ಏಣಿ ಕೊಟ್ಟೆ ಕಚ್ಚಲೆಂದು ಹಾವನಿಟ್ಟೆ
ನೆರಳಿನಂತೆ ಸಾವ ಬಿಟ್ಟೆ ಹೊಂಚಿ ಕೆಡವಲು ||೨||

ತಾಮಸಕ್ಕೆ ಬಲವ ಕೊಟ್ಟೆ ರಾಜಸಕ್ಕೆ ಫಲವ ಕೊಟ್ಟೆ
ಸತ್ತ್ವಕೆ ಷಂಡತ್ವ ಕೊಟ್ಟೆ ತತ್ತ್ವ ಗೊಣಗಲು ।
ಕೈಯ ಕೊಟ್ಟೆ ಕೆಡವಲೆಂದು ಕಾಲ ಕೊಟ್ಟೆ ಎಡವಲೆಂದು
ಬುದ್ಧಿ ಕೊಟ್ಟೆ ನಿನ್ನನ್ನೆ ಅಲ್ಲಗಳೆಯಲು ||೩||

||೮||

## || ಬದುಕು ಮಾಯೆಯ ಮಾಟ || – ದ. ರಾ. ಬೇಂದ್ರೆ

ಬದುಕು ಮಾಯೆಯ ಮಾಟ, ಮಾತು ನೊರೆ ತೆರೆಯಾಟ, ಜೀವ ಮೌನದ ತುಂಬ, ತುಂಬ ಮುನ್ನೀರು ।
ಕರುಣೋದಯದ ಕೂಡ ಅರುಣೋದಯವು ಇರಲು ಎದೆಯು ತುಂಬುತ್ತಲಿದೆ ಹೊಚ್ಚ ಹೊನ್ನೀರು ॥

ನಿಜದಲ್ಲೆ ಒಲವಿರಲಿ ಚೆಲುವಿನಲೆ ನಲಿವಿರಲಿ, ಒಳಿತಿನಲೆ ಬಲವಿರಲಿ ಜೀವಗೆಳೆಯ ।
ದೇವ ಜೀವನ ಕೇಂದ್ರ ಒಬ್ಬೊಬ್ಬನೂ ಇಂದ್ರ, ಏನಿದ್ದರೂ ಎಲ್ಲ ಎಲ್ಲೆ ತಿಳಿಯ ||೧||

ಆತನಾಯ್ಕೆಯೆ ನಮ್ಮ ಜೀವ ನೌಕೆಯ ತಮ್ಮ ಧ್ರುವ ಮರೆಯದಂತೆ ನಡೆಸುತ್ತಲಿರಲಿ ।
ಈ ನಾನು ಆ ನೀನು ಒಂದೆ ತಾನಿನ ತಾನು, ತಾಳ ಲಯ ರಾಗಗಳು ಸಹಜ ಬರಲಿ ||೨||

||೯||

## || ಬಂಗಾರ ನೀರ ಕಡಲಾಚೆ || – ದ. ರಾ. ಬೇಂದ್ರೆ

ಬಂಗಾರ ನೀರ ಕಡಲಾಚೆಗೀಚೆಗಿದೆ ನೀಲ ನೀಲ ತೀರ ।
ಮಿಂಚು ಬಳಗ ತೆರೆ–ತೆರೆಗಳಾಗಿ ಅಲೆಯುವುದು ಪುಟ್ಟ ಪೂರ ।
ಅದು ನಮ್ಮ ಊರು ಇದು ನಿಮ್ಮ ಊರು ತಮ್ತಮ್ಮ ಊರು ಧೀರ ।
ಅದರೊಳಗೆ ನಾವು ನಮ್ಮೊಳಗೆ ತಾವು ಅದು ಇಲ್ಲವಣ್ಣ ದೂರ ॥

ಕರೆ ಬಂದಿತಣ್ಣ ತೆರೆ ಬಂದಿತಣ್ಣ ನೆರೆ ಬಂದಿತಣ್ಣ ಬಳಿಗೆ ।
ಹರೀತದ ಭಾವ ಬೆರೀತದ ಜೀವ ಅದರೊಳಗೆ ಒಳಗೆ ಒಳಗೆ ।
ಇದೆ ಸಮಯವಣ್ಣ ಇದೆ ಸಮಯ ತಮ್ಮ ನಮ್‌ನಿಮ್ಮ ಆತ್ಮಗಳಿಗೆ ।
ಅಂಬಿಗನು ಬಂದನಂಬಿಗನು ಬಂದ ಬಂದದಾ ದಿವ್ಯ ಘಳಿಗೆ ॥೧॥

ಇದು ಉಪ್ಪುನೀರ ಕಡಲಲ್ಲೊ ನಮ್ಮ ಒಡಲಲ್ಲು ಇದರ ನೆಲೆಯು ।
ಕಂಡವರಿಗಲ್ಲೊ ಕಂಡವರಿಗಷ್ಟೆ ತಿಳಿದದಾ ಇದರ ಬೆಲೆಯು ।
ಸಿಕ್ಕಲ್ಲಿ ಅಲ್ಲ ಸಿಕ್ಕಲ್ಲೆ ಮಾತ್ರ ಒಡೆಯುವುದು ಇದರ ಸೆಲೆಯು ।
ಕಣ್ಣರಳಿದಾಗ ಕಣ್‌ಹೊರಳಿದಾಗ ಹೊಳೆಯುವುದು ಇದರ ಕಳೆಯು ॥೨॥

ಬಂದವರ ಬಳಿಗೆ ಬಂದದಾ ಮತ್ತು ನಿಂದವರ ನೆರೆಗು ಬಂದದೋ ಬಂದದಾ ।
ನವ ಮನುವು ಬಂದ, ಹೊಸ ದ್ವೀಪಗಳಿಗೆ ಹೊರಟಾನಾ ಬನ್ನೀ ಅಂದದೋ ಅಂದದಾ ॥೩॥

॥೧೦॥

## ॥ ಆವು ಈವಿನ ನಾವು ನೀವಿಗೆ ॥ – ದ. ರಾ. ಬೇಂದ್ರೆ

ಆವು ಈವಿನ ನಾವು ನೀವಿಗೆ ಆನು ತಾನಾದ ತನ ನನಾ ।
ನಾನು ನೀನಿನ ಈ ನೀ ನಾನಿಗೆ ಬೇನೆ ಏನೋ ಕಾಣೆ ನಾ ॥
ಚಾರು ತಂತ್ರಿಯ ಚರಣ–ಚರಣದ ಘನಘನಿತ ಚತುರಸ್ವನಾ ।
ಹತವೋ ಹಿತವೋ ಆ ಅನಾಹತ ಮಿತಿಮಿತಿಗೆ ಇತಿ ನನ ನನಾ ।
ಬೆನ್ನಿನಾನಿಕೆ ಜನನ ಜಾನಿಕೆ ಮನನವೇ ಸಹಿತಸ್ತನಾ ॥

ಗೋವಿನ ಕೊಡುಗೆಯ ಹದಗದ ಹುಡಿಗಿ ಬೆಡಗಿಲೆ ಬಂದಳು ನಡುನಡುಗಿ ।
ಸಲಿಗೆಯ ಸುಲಿಗೆಯ ಬಯಕೆಯ ಒಲುಮೆ ಬಯಲಿನ ನೆಯ್ಗೆಯ ಸಿರಿಯುಡುಗಿ ।
ನಾಡಿಯ ನಡಿಗೆಯ ನಲುವಿನ ನಾಲಿಗೆ ನೆನೆದಿರೆ ಸೋಲುವ ಸೊಲ್ಲಿನಲಿ ।
ಮುಟ್ಟದ ಮಾಟದ ಹುಟ್ಟದ ಹುಟ್ಟಿಗೆ ಜೇನಿನ ಠಳಿಮಳಿ ಸನಿಹ ಹನಿ ।
ಬೆಚ್ಚದ ವೆಚ್ಚವು ಬಸರಿನ ಮೊಳಕೆ ಬಚ್ಚಿದ್ದ್ಯಾವುದೋ ನಾ ತಿಳಿಯೆ ।
ಭೂತದ ಭವ ಉದ್ಭವ ಜಾವ ಮೊಲೆ ಊಡಿಸುವಳು ಪ್ರತಿಭೆ ನವ ॥೧॥

ಚಿತ್ತಿಮಳಿ ತತ್ತಿ ಹಾಕತಿತ್ತು ಸ್ವಾತಿ ಮುತ್ತಿನೊಳಗ ।
ಸತ್ತ್ಯೋ ಮಗನ ಅಂತ ಕೂಗಿದರು ಸಾವೀ ಮಗಳು ಭಾವಿ ಮಗಳು ಕೂಡಿ ।
ಈ ಜಗ ಅಪ್ಪ ಅಮ್ಮನ ಮಗ ಅಮ್ಮನೊಳಗ ಅಪ್ಪನ ವೊಗ ।
ಅಪ್ಪನ ಕತ್ತಿಗೆ ಅಮ್ಮನ ನೊಗ ನಾ ಅವರ ಕಂದ ಶ್ರೀ ಗುರುದತ್ತ ಅಂದ ॥
ನಾನು–ನೀನು–ಆನು–ತಾನು ನಾಕು ನಾಕೇ ತಂತಿ ।
ಸೊಲ್ಲಿಸಿದರು ನಿಲ್ಲಿಸಿದರು ಓಂ ದಂತಿ ।
ಗಣನಾಯಕ ಮ್ಯೆ ಮಾಯಕ ಸ್ಯೆ ಸಾಯಕ ಮಾಡಿ ।
ಗುರಿಯ ತುಂಬಿ ಕುರಿಯ ಕಣ್ಣು ಧಾತು ಮಾತು ಕೂಡಿ ॥೨॥

॥೧೧॥

## ॥ ಇಳಿದು ಬಾ ತಾಯಿ ॥ – ದ. ರಾ. ಬೇಂದ್ರೆ

ಇಳಿದು ಬಾ ತಾಯಿ ಇಳಿದು ಬಾ, ಇಳಿದು ಬಾ ತಾಯಿ ಇಳಿದು ಬಾ ।

ಹರನ ಜಡೆಯಿಂದ ಹರಿಯ ಅಡಿಯಿಂದ ಋಷಿಯ ತೊಡೆಯಿಂದ ನುಸುಳಿ ಬಾ ।
ದೇವದೇವರನು ತಣಿಸಿ ಬಾ, ದಿಗ್ದಿಗಂತದಲಿ ಹಣಿಸಿ ಬಾ, ಚರಾಚರಗಳಿಗೆ ಉಣಿಸಿ ಬಾ ।
ನಿನಗೆ ಪೊಡಮಡುವೆ ನಿನ್ನನುಡುತೊಡುವೆ ಏಕೆ ಎಡೆತಡೆವೆ ಸುರಿದು ಬಾ ।
ಸ್ವರ್ಗ ತೊರೆದು ಬಾ, ಬಯಲ ಜರೆದು ಬಾ, ನೆಲದಿ ಹರಿದು ಬಾ । ಬಾರೆ ಬಾ ತಾಯಿ ಇಳಿದು ಬಾ ॥೧॥

ದಯೆಯಿರದ ದೀನ ಹರೆಯಳಿದ ಹೀನ ನೀರಿರದ ಮೀನ ಕರೆಕರೆವ ಬಾ ।
ಕರು ಕಂಡ ಕರುಳೆ ಮನ ಉಂಡ ಮರುಳೆ ಉದ್ದಂಡ ಅರುಳೆ ಸುಳಿ ಸುಳಿದು ಬಾ ।
ಶಿವ ಶುಭ್ರ ಕರುಣೆ ಅತಿ ಕಿಂಚದರುಣೆ ವಾತ್ಸಲ್ಯ ವರಣೆ ಇಳಿ ಇಳಿದು ಬಾ ।
ಸುರಸ್ವಪ್ನವಿದ್ದ ಪ್ರತಿಬಿಂಬ ಬಿದ್ದ ಉದ್ಬುದ್ಧ ಶುದ್ಧ ನೀರೆ ।
ಎಚ್ಚೆತ್ತು ಎದ್ದ  ಆಕಾಶದುದ್ದ ಧರೆಗಿಳಿಯಲಿದ್ದ ಧೀರೆ ।
ಸಿರಿವಾರಿಜಾತ ವರಪಾರಿಜಾತ ತಾರಾ ಕುಸುಮದಿಂದೆ ।
ವೃಂದಾರವಂದ್ಯೆ ಮಂದಾರಗಂಧೆ ನೀನೇ ತಾಯಿ ತಂದೆ । ರಸಪೂರಜನ್ಯೆ ನೀನಲ್ಲ ಅನ್ಯೆ ಸಚ್ಚಿದಾನಂದ ಕನ್ಯೆ ॥೨॥

ಬಂದಾರೆ ಬಾರೆ ಒಂದಾರೆ ಸಾರೆ ಕಣ್ಧಾರೆ ತಡೆವರೇನೆ ।
ಅವತಾರವೆಂದೆ ಎಂದಾರೆ ತಾಯೆ ಈ ಅಧಃಪಾತವನ್ನೆ ।
ಹರಕೆ ಸಂದಂತೆ ಮಮತೆ ಮಿಂದಂತೆ ತುಂಬಿ ಬಂದಂತೆ ।
ಧುಂ ಧುಂ ಎಂದಂತೆ ದುಡುಕಿ ಬಾ, ನಿನ್ನ ಕಂದನ್ನ ಹುಡುಕಿ ಬಾ ।
ಹುಡುಕಿ ಬಾ ತಾಯೆ ದುಡುಕಿ ಬಾ, ಹರಣ ಹೊಸತಾಗೆ ಹೊಳೆದು ಬಾ ।
ಬಾಳು ಬೆಳಕಾಗೆ ಬೆಳೆದು ಬಾ, ಶಂಭು ಶಿವಹರನ ಚಿತ್ತೆ ಬಾ ।
ದತ್ತ ನರಹರಿಯ ಮುತ್ತೆ ಬಾ, ಅಂಬಿಕಾತನಯನತ್ತೆ ಬಾ ।
ಇಳಿದು ಬಾ ತಾಯಿ ಇಳಿದು ಬಾ, ಇಳಿದು ಬಾ ತಾಯಿ ಇಳಿದು ಬಾ ॥೩॥

॥೧೨॥

## ॥ ಕುರುಡು ಕಾಂಚಾಣ ॥ – ದ. ರಾ. ಬೇಂದ್ರೆ

ಕುರುಡು ಕಾಂಚಾಣ ಕುಣಿಯುತಲಿತ್ತು, ಕಾಲಿಗೆ ಬಿದ್ದವರ ತುಳಿಯುತಲಿತ್ತು ।

ಬಾಣಂತಿಯೆಲುಬ ಸಾಬಾಣದ ಬಿಳುಪಿನ ಕಾಣದ ಕಿರುಗೆಜ್ಜೆ ಕಾಲಾಗ ಇತ್ತು ।
ಸಣ್ಣ ಕಂದಮ್ಮಗಳ ಕಣ್ಣಿನ ಕವಡಿಯ ತಣ್ಣನ್ನ ಜೋಮಾಲೆ ಕೊರಳೊಳಗಿತ್ತು ॥೧॥

ಬಡವರ ಒಡಲಿನ ಬಡಬಾನಲದಲ್ಲಿ ಸುಡುಸುಡು ಪಂಜು ಕೈಯೊಳಗಿತ್ತೊ ।
ಕಂಬನಿ ಕುಡಿಯುವ ಹುಂಬ ಬಾಯಿಲಿ ಮೈದುಂಬಿದಂತುಧೊ ಉಧೊ ಎನ್ನುತ್ತಲಿತ್ತೊ ॥೨॥

ಕೂಲಿ ಕುಂಬಳಿಯವರ ಪಾಲಿನ ಮೈದೊಗಲ ಧೂಳಿಯ ಭಂಡಾರ ಹಣೆಯೊಳಗಿತ್ತೊ ।
ಗುಡಿಯೊಳಗೆ ಗಣಣ ಮಹಡಿಯೊಳಗೆ ತನನ ಅಂಗಡಿಯೊಳಗೆ ಝಣಣನ ನುಡಿಗೊಡುತಿತ್ತೊ ॥೩॥

ಹ್ಯಾಂಗಾರೆ ಕುಣಿಕುಣಿದು ಮಂಗಾಟ ನಡೆದಾಗ ಅಂಗಾತ ಬಿತ್ತು ಹೆಗಲಲ್ಲಿ ಎತ್ತು ।
ಹ್ಯಾಂಗಾರೆ ಕುಣಿಕುಣಿದು ಮಂಗಾಟ ನಡೆದಾಗ ಅಂಗಾತ ಬಿತ್ತೊ ಹೆಗಲಲ್ಲಿ ಎತ್ತೊ ॥೪॥

॥೧೩॥

## ॥ ಭಾವವೆಂಬ ಹೂವು ಅರಳಿ ॥ – ಚಿ. ಉದಯಶಂಕರ

ಭಾವವೆಂಬ ಹೂವು ಅರಳಿ ಗಾನವೆಂಬ ಗಂಧ ಚೆಲ್ಲಿ ।
ರಾಗವೆಂಬ ಜೇನ ಹೊನಲು ತುಂಬಿ ಹರಿಯಲಿ, ಜಗವ ಕುಣಿಸಿ ತಣಿಸಲಿ ॥

ಗಾನಕೆ ನಲಿಯದ ಮನಸೇ ಇಲ್ಲ, ಗಾನಕೆ ಮಣಿಯದ ಜೀವವೆ ಇಲ್ಲ ।
ಗಾನಕೆ ಒಲಿಯದ ದೇವರೆ ಇಲ್ಲ, ಗಾನವೆ ತುಂಬಿದೆ ಈ ಜಗವೆಲ್ಲ ॥೧॥

ದಾಸರು ಹರಿಯ ಸ್ಮರಣೆಯ ಮಾಡಿ, ದರುಶನ ಪಡೆದರು ಅನುದಿನ ಪಾಡಿ ।
ಶರಣರು ಹರನ ನೆನೆಯುತ ಬೇಡಿ, ಶಿವನ ಕಂಡರು ವಚನವ ಹಾಡಿ ॥೨॥

ವಿಶ್ವವೆ ಅರಳಿತು ಓಂಕಾರದಲಿ, ವಾಣಿಯ ವೀಣೆಯ ಝೇಂಕಾರದಲಿ ।
ಕುಣಿಯಿತು ನಾರದನ ಗಾನದಲ್ಲಿ, ತಣಿಯಿತು ಕೃಷ್ಣನ ಮುರಳಿಯಲಿ ॥೩॥

॥೧೪॥

## ॥ ಎಲ್ಲೋ ಹುಡುಕಿದೆ ಇಲ್ಲದ ದೇವರ ॥ – ಜಿ. ಎಸ್. ಶಿವರುದ್ರಪ್ಪ

ಎಲ್ಲೋ ಹುಡುಕಿದೆ ಇಲ್ಲದ ದೇವರ ಕಲ್ಲು ಮಣ್ಣುಗಳ ಗುಡಿಯೊಳಗೆ ।
ಇಲ್ಲೇ ಇರುವ ಪ್ರೀತಿ ಸ್ನೇಹಗಳ ಗುರುತಿಸದಾದೆನು ನಮ್ಮೊಳಗೆ ॥

ಎಲ್ಲಿದೆ ನಂದನ ಎಲ್ಲಿದೆ ಬಂಧನ ಎಲ್ಲಾ ಇವೆ ಈ ನಮ್ಮೊಳಗೆ ।
ಒಳಗಿನ ತಿಳಿಯನು ಕಲಕದೆ ಇದ್ದರೆ ಅಮೃತದ ಸವಿ ಇದೆ ನಾಲಿಗೆಗೆ ॥೧॥

ಹತ್ತಿರವಿದ್ದೂ ದೂರ ನಿಲ್ಲುವೆವು ನಮ್ಮ ಅಹಮ್ಮಿನ ಕೋಟೆಯಲಿ ।
ಎಷ್ಟು ಕಷ್ಟವೋ ಹೊಂದಿಕೆ ಎಂಬುದು ನಾಲ್ಕು ದಿನದ ಈ ಬದುಕಿನಲಿ ॥೨॥

॥೧೫॥

## ॥ ವೇದಾಂತಿ ಹೇಳಿದನು ॥ – ಜಿ. ಎಸ್. ಶಿವರುದ್ರಪ್ಪ

ವೇದಾಂತಿ ಹೇಳಿದನು ಹೊನ್ನೆಲ್ಲ ಮಣ್ಣು ಮಣ್ಣು ।
ಕವಿಯೊಬ್ಬ ಹಾಡಿದನು ಮಣ್ಣೆಲ್ಲ ಹೊನ್ನು ಹೊನ್ನು ॥

ವೇದಾಂತಿ ಹೇಳಿದನು ಈ ಹೆಣ್ಣು ಮಾಯೆ ಮಾಯೆ ।
ಕವಿಯೊಬ್ಬ ಕನವರಿಸಿದನು ಓ ಇವಳೆ ಚೆಲುವೆ ।
ಇವಳ ಜೊತೆಯಲ್ಲಿ ನಾನು ಸ್ವರ್ಗವನೆ ಗೆಲ್ಲುವೆ ॥೧॥

ವೇದಾಂತಿ ಹೇಳಿದನು ಈ ಬದುಕು ಶೂನ್ಯ ಶೂನ್ಯ ।
ಕವಿ ನಿಂತು ಸಾರಿದನು ಓ ಇದು ಅಲ್ಲ ಶೂನ್ಯ ।
ಜನ್ಮಜನ್ಮದಿ ಸವಿದೆ ನಾನೆಷ್ಟು ಧನ್ಯ ॥೨॥

||೧೬||

## || ಕಾಣದ ಕಡಲಿಗೆ || – ಜಿ. ಎಸ್. ಶಿವರುದ್ರಪ್ಪ

ಕಾಣದ ಕಡಲಿಗೆ ಹಂಬಲಿಸಿದೆ ಮನ ।
ಕಾಣಬಲ್ಲೆನೆ ಒಂದು ದಿನ, ಕಡಲನು ಕೂಡಬಲ್ಲೆನೆ ಒಂದು ದಿನ ॥

ಕಾಣದ ಕಡಲಿನ ಮೊರೆತದ ಜೋಗುಳ ಒಳಗಿವಿಗಿಂದು ಕೇಳುತಿದೆ ।
ನನ್ನ ಕಲ್ಪನೆಯು ತನ್ನ ಕಡಲನೆ ಚಿತ್ರಿಸಿ ಚಿಂತಿಸಿ ಸುಯ್ಯುತಿದೆ ।
ಎಲ್ಲಿರುವುದೋ ಅದು, ಎಂತಿರುವುದೋ ಅದು ।
ನೋಡಬಲ್ಲೆನೆ ಒಂದು ದಿನ, ಕಡಲನು ಕೂಡಬಲ್ಲೆನೆ ಒಂದು ದಿನ ॥೧॥

ಸಾವಿರ ಹೊಳೆಗಳು ತುಂಬಿ ಹರಿದರೂ ಒಂದೇ ಸಮನಾಗಿಹುದಂತೆ ।
ಸುನೀಲ ವಿಸ್ತರ ತರಂಗ ಶೋಭಿತ ಗಂಭೀರಾಂಬುಧಿ ತಾನಂತೆ । ಮುನ್ನೀರಂತೆ, ಅಪಾರವಂತೆ ।
ಕಾಣಬಲ್ಲೆನೆ ಒಂದು ದಿನ, ಅದರೊಳು ಕರಗಲಾರೆನೆ ಒಂದು ದಿನ ॥೨॥

ಜಟಿಲ ಕಾನನದ ಕುಟಿಲ ಪಥಗಳಲಿ ಹರಿವ ತೊರೆಯು ನಾನು ।
ಎಂದಿಗಾದರೂ ಕಾಣದ ಕಡಲನು ಸೇರಬಲ್ಲೆನೇನು ।
ಸೇರಬಹುದೆ ನಾನು, ಕಡಲ ನೀಲಿಯೊಳು ಕರಗಬಹುದೆ ನಾನು ।
ಕರಗಬಹುದೆ ನಾನು, ಕರಗಬಹುದೆ ನಾನು ॥೩॥

||೧೭||

## || ತನುವು ನಿನ್ನದು ಮನವು ನಿನ್ನದು || – ರಸರ್ಷಿ ಕುವೆಂಪು

ತನುವು ನಿನ್ನದು ಮನವು ನಿನ್ನದು, ಎನ್ನ ಜೀವನ ಘನವು ನಿನ್ನದು ।
ನಾನು ನಿನ್ನವನೆಂಬ ಹೆಮ್ಮೆಯ ಋಣವು ಮಾತ್ರವೆ ನನ್ನದು ॥

ನೀನು ಹೊಳೆದರೆ ನಾನು ಹೊಳೆವೆನು ನೀನು ಬೆಳೆದರೆ ನಾನು ಬೆಳೆವೆನು ।
ನನ್ನ ಹರಣದ ಹರಣ ನೀನು ನನ್ನ ಮರಣದ ಮರಣವು ॥೧॥

ನನ್ನ ಮನದಲಿ ನೀನೆ ಯುಕ್ತಿ ನನ್ನ ಹೃದಯದಿ ನೀನೆ ಭಕ್ತಿ ।
ನೀನೆ ಮಾಯಾ ಮೋಹ ಶಕ್ತಿಯು ನನ್ನ ಜೀವನ ಮುಕ್ತಿಯು ॥೨॥

||೧೮||

## || ತೇನ ವಿನಾ || – ರಸರ್ಷಿ ಕುವೆಂಪು

ತೇನ ವಿನಾ ತೇನ ವಿನಾ, ತೃಣಮಪಿ ನ ಚಲತಿ ತೇನ ವಿನಾ ।
ಮಮತೆಯ ಬಿಡು ಹೇ ಮೂಢಮನ ॥

ರವಿಗಿಲ್ಲದ ಭಯ ಶಶಿಗಿಲ್ಲದ ಭಯ ತಾರಾನಿವಹಕೆ ಇರದ ಭಯ ।
ನಿನಗೇತಕೆ ಬಿಡು ಅಣು ಶ್ರದ್ಧೆಯನಿಡು ನಿನ್ನನೆ ನೈವೇದ್ಯವ ನೀಡು ॥೧॥

ಎಲ್ಲೆಲ್ಲಿಯು ಕೈ ಎಲ್ಲೆಲ್ಲಿಯು ಕಾಲ್ ಎಲ್ಲೆಲ್ಲಿಯು ಕಣ್ ತಾನಾದ ।
ಸಚ್ಚಿತ್‌ಶಕ್ತಿಯ ಆನಂದವಿರಲ್ ಬಿಡು ಏತಕೆ ನಿನಗೆ ವಿಷಾದ ॥೨॥

॥೧೯॥

## ॥ ಅಂತರತಮ ನೀ ಗುರು ॥ – ರಸರ್ಷಿ ಕುವೆಂಪು

ಅಂತರತಮ ನೀ ಗುರು, ಹೇ ಆತ್ಮ ತಮೋಹಾರಿ ॥

ಜಟಿಲ ಕುಟಿಲತಮ ಅಂತರಂಗ ಬಹುಭಾವ ವಿಪಿನ ಸಂಚಾರಿ ॥೧॥

ಜನುಮ ಜನುಮ ಶತಕೋಟಿ ಸಂಸ್ಕಾರ ಪರಮ ಚರಮ ಸಂಸ್ಕಾರಿ ॥೨॥

ಪಾಪ ಪುಣ್ಯ ನಾನಾ ಲಲಿತ ರುದ್ರಲೀಲಾ ರೂಪ ಅರೂಪ ವಿಹಾರಿ ॥೩॥

॥೨೦॥

## ॥ ಆನಂದಮಯ ಈ ಜಗಹೃದಯ ॥ – ರಸರ್ಷಿ ಕುವೆಂಪು

ಆನಂದಮಯ ಈ ಜಗಹೃದಯ ಏತಕೆ ಭಯ ಮಾಣೋ ।
ಸೂರ್ಯೋದಯ ಚಂದ್ರೋದಯ ದೇವರ ದಯ ಕಾಣೋ ॥

ಬಿಸಿಲಿದು ಬರಿ ಬಿಸಿಲಲ್ಲವೋ ಸೂರ್ಯನ ಕೃಪೆ ಕಾಣೋ ।
ಸೂರ್ಯನು ಬರಿ ರವಿಯಲ್ಲವೋ ಆ ಭ್ರಾಂತಿಯ ಮಾಣೋ ॥೧॥

ರವಿವದನವೆ ಶಿವಸದನವೋ ಬರಿ ಕಣ್ಣದು ಮಣ್ಣೋ ।
ಶಿವನಿಲ್ಲದೆ ಸೌಂದರ್ಯವೇ ಶವಮುಖದ ಕಣ್ಣೋ ॥೨॥

ಉದಯದೊಳೇನ್ ಹೃದಯವ ಕಾಣ್ ಅದೇ ಅಮೃತದ ಹಣ್ಣೋ ।
ಶಿವ ಕಾಣದೆ ಕವಿ ಕುರುಡನೋ ಶಿವ ಕಾವ್ಯದ ಕಣ್ಣೋ ॥೩॥

॥೨೧॥

## ॥ ಓ ನನ್ನ ಚೇತನ ॥ – ರಸರ್ಷಿ ಕುವೆಂಪು

ಓ ನನ್ನ ಚೇತನ, ಆಗು ನೀ ಅನಿಕೇತನ ।

ರೂಪ ರೂಪಗಳನು ದಾಟಿ, ನಾಮ ಕೋಟಿಗಳನು ಮೀಟಿ, ಎದೆಯ ಬಿರಿಯೆ ಭಾವದೀಟಿ ॥೧॥

ನೂರು ಮತದ ಹೊಟ್ಟ ತೂರಿ, ಎಲ್ಲ ತತ್ತ್ವದೆಲ್ಲೆ ಮೀರಿ, ನಿರ್ದಿಗಂತವಾಗಿ ಏರಿ ॥೨॥

ಎಲ್ಲಿಯೂ ನಿಲ್ಲದಿರು, ಮನೆಯನೆಂದು ಕಟ್ಟದಿರು, ಕೊನೆಯನೆಂದು ಮುಟ್ಟದಿರು, ಓ ಅನಂತವಾಗಿರು ॥೩॥

ಅನಂತ ತಾನ್ ಅನಂತವಾಗಿ, ಆಗುತಿಹನೆ ನಿತ್ಯಯೋಗಿ, ಅನಂತ ನೀ ಅನಂತವಾಗು, ಆಗು ಆಗು ಆಗು ಆಗು ॥೪॥

॥೨೨॥

## ॥ ಯಾವ ಜನ್ಮದ ಮೈತ್ರಿ ॥ – ರಸರ್ಷಿ ಕುವೆಂಪು

ಯಾವ ಜನ್ಮದ ಮೈತ್ರಿ ಈ ಜನ್ಮದಲಿ ಬಂದು ನಮ್ಮಿಬ್ಬರನು ಮತ್ತೆ ಬಂಧಿಸಿಹುದೋ ಕಾಣೆ ॥

ಎಲ್ಲಿದ್ದರೇನಂತೆ ನಿನ್ನನೊಲಿಯದೆ ಮಾಣೆ, ಗುರುದೇವನಾಣೆ, ಓ ನನ್ನ ನೆಚ್ಚಿನ ಬಂಧು ॥೧॥

ವಿಶ್ವ ಜೀವನವೊಂದು ಪಾರವಿಲ್ಲದ ಸಿಂಧು, ಮೇಲೆ ತೆರೆನೊರೆಯೆದ್ದು ಭೋರ್ಗರೆಯುತಿರೆ ರೇಗಿ ।
ಅದರಂತರಾಳದಲಿ ಗುಪ್ತಗಾಮಿನಿಯಾಗಿ ಹೃದಯಗಳು ನಲಿಯುತಿರೆ ಪ್ರೇಮತೀರ್ಥದಿ ಮಿಂದು ॥೨॥

ಅದರರ್ಥಗಿರ್ಥಗಳು ಸೃಷ್ಟಿಕರ್ತನಿಗಿರಲಿ, ವ್ಯರ್ಥ ಜಿಜ್ಞಾಸೆಯಲಿ ಕಾಲಹರಣವದೇಕೆ ।
ಕುರುಡನಾದಗೆ ದಾರಿಯರ್ಥ ತಿಳಿಯಲೆಬೇಕೆ, ಹಾದಿ ಸಾಗಿದರಾಯ್ತು ಬರುವುದೆಲ್ಲಾ ಬರಲಿ ।
ಬಾರಯ್ಯ ಮಮಬಂಧು ಜೀವನ ಪಥದೊಳಾವು ಒಂದಾಗಿ ಮುಂದುವರೆಯುವ ಹಿಂದಿರಲಿ ಸಾವು ॥೩॥

॥೨೩॥

## ॥ ಯಾವ ಕಾಲದ ಶಾಸ್ತ್ರವೇನು ಹೇಳಿದರೇನು ॥ – ರಸರ್ಷಿ ಕುವೆಂಪು

ಯಾವ ಕಾಲದ ಶಾಸ್ತ್ರವೇನು ಹೇಳಿದರೇನು, ಎದೆಯ ದನಿಗೂ ಮಿಗಿಲು ಶಾಸ್ತ್ರವಿಹುದೇನು ।
ಎಂದೋ ಮನು ಬರೆದಿಟ್ಟುದಿಂದೆಮಗೆ ಕಟ್ಟೇನು, ನಿನ್ನೆದೆಯ ದನಿಯೆ ಋಷಿ ।
ಮನು ನಿನಗೆ ನೀನು, ಮನು ನಿನಗೆ ನೀನು, ಮನು ನಿನಗೆ ನೀನು ॥

ನೀರಡಿಸಿ ಬಂದ ಸೋದರಗೆ ನೀರನು ಕೊಡಲು ಮನುಧರ್ಮಶಾಸ್ತ್ರವೇನದೊರೆಯಬೇಕೇನು ।
ನೊಂದವರ ಕಂಬನಿಯನೊರೆಸಿ ಸಂತೈಸುವಡೆ ಶಾಸ್ತ್ರಪ್ರಮಾಣ ಅದಕಿರಲೇಬೇಕೇನು ॥೧॥

ಹಿಂದಿನ ಋಷಿಗಳು ಮಾನವರೇ ನಮ್ಮಂತೆ, ಅವರ ಶಾಸ್ತ್ರವು ಅವರ ಕಾಲಕ್ಕೆ ಮಾತ್ರ ।
ಕಾಲಕ್ಕೆ ತಕ್ಕಂತೆ ದೇಶಕ್ಕೆ ತಕ್ಕಂತೆ, ನಮ್ಮ ಹೃದಯವೇ ನಮಗೆ ವಿಧರ್ಮಸೂತ್ರ ॥೨॥

॥೨೪॥

## ॥ ಮುಚ್ಚುಮರೆ ಇಲ್ಲದೆಯೆ ॥ – ರಸರ್ಷಿ ಕುವೆಂಪು

ಮುಚ್ಚುಮರೆ ಇಲ್ಲದೆಯೆ ನಿನ್ನ ಮುಂದೆಲ್ಲವನು ಬಿಚ್ಚಿಡುವೆ ಓ ಗುರುವೆ ಅಂತರಾತ್ಮ ।
ನಾಕವಿದೆ ನರಕವಿದೆ ಪಾಪವಿದೆ ಪುಣ್ಯವಿದೆ ಸ್ವೀಕರಿಸು ಓ ಗುರುವೆ ಅಂತರಾತ್ಮ ॥

ರವಿಗೆ ಕಾಂತಿಯನೀವ ನಿನ್ನ ಕಣ್ಣೀಕ್ಷಿಸಲು ಪಾಪ ತಾನುಳಿಯುವುದೆ ಪಾಪವಾಗಿ ।
ಗಂಗೆ ತಾನುದ್ಭವಿಪ ನಿನ್ನಡಿಯ ಸೋಂಕಿಂಗೆ ನರಕ ತಾನುಳಿಯುವುದೆ ನರಕವಾಗಿ ॥೧॥

ಸಾಂತರೀತಿಯ ನೆಮ್ಮಿ ಕದಡಿರುವುದೆನ್ನಾತ್ಮ ನಾಂತರೀತಿಯದೆಂತೋ ಓ ಅನಂತ ।
ನನ್ನ ನೀತಿಯ ಕುರುಡಿನಿಂದೆನ್ನ ರಕ್ಷಿಸೈ ನಿನ್ನ ಪ್ರೀತಿಯ ಬೆಳಕಿನಾನಂದಕೊಯ್ ॥೨॥

॥೨೫॥

## ॥ ಅನಾದಿ ಗಾನವು ನಾನು ॥ – ರಸರ್ಷಿ ಕುವೆಂಪು

ಅನಾದಿ ಗಾನವು ನಾನು, ಹೇ ಅನಂತ ಗಾಯಕನೇ ನಿನ್ನ ॥

ರಚಿಸಿದ್ಯೆ ಈ ಗಾನ ಮಾಧುರ್ಯಕಾಗಿ ನೀನ್ ವಿಶ್ವವೆಂಬುವ ಮಹಾ ನಿನ್ನ ವೀಣೆಯನು ।
ನಿನ್ನ ಸ್ಪರ್ಶನಕೆ ಆದಿಯಲಿ ಆ ಜಡವೀಣೆ ಹಾಡತೊಡಗಿತು ನನ್ನ ಜೀವಗಾನವನು ॥೧॥

ಈ ಗಾನವನು ಕೇಳಿ ರವಿಚಂದ್ರ ತಾರಾವಳಿ ರಾಸಲೀಲೆಗೆ ತೊಡಗಿದವು ಹರ್ಷ ತಾಳಿ ।
ಕಾಲದೇಶಾಕಾಶ ಸತ್ಯಮಿಥ್ಯೆಗಳೆಲ್ಲ ಆನಂದಸ್ಫೂರ್ತಿಯಲಿ ಮೈ ತಳೆದುವೆಲ್ಲ ॥೨॥

ಗಾನವಾನಂದದಲಿ ಗಾಯಕನ ರಮಿಸುತಿದೆ ಚಿರಮಧುರನೂತನ ಗೀತರಸಪಾನ ।
ಗಾನಗಾಯಕರೊಲ್ಮೆತೀರ್ಥದಲಿ ಲಭಿಸುತಿದೆ ಕಲ್ಪಬುದ್ಬುದಗಳಿಗೆ ಸಂಸಾರಸ್ನಾನ ॥೩॥

॥೨೬॥

## ॥ ಬಾ ಇಲ್ಲಿ ಸಂಭವಿಸು ॥ – ರಸರ್ಷಿ ಕುವೆಂಪು

ಬಾ ಇಲ್ಲಿ ಸಂಭವಿಸು ಇಂದೆನ್ನ ಹೃದಯದಲಿ ನಿತ್ಯವೂ ಅವತರಿಪ ಸತ್ಯಾವತಾರ ।
ಮಣ್ಣಾಗಿ ಮರವಾಗಿ ಮಿಗವಾಗಿ ಖಗವಾಗಿ ಭವಭವದಿ ಭವಿಸಿಹೆ ಭವವಿದೂರ ॥

ಮಣ್ತನಕೆ ಮರತನಕೆ ಮಿಗತನಕೆ ಖಗತನಕೆ ಮುನ್ನಡೆಗೆ ಕಣ್ಣಾದ ಗುರುವೆ ಬಾರ ।
ಮೂಡಿ ಬಂದಿಂದೆನ್ನ ನರರೂಪ ಚೇತನದಿ ನಾರಾಯಣತ್ವಕ್ಕೆ ದಾರಿ ತೋರ ॥೧॥

ಅಂದು ಅರಮನೆಯಲ್ಲಿ ಮತ್ತೆ ಸೆರೆಮನೆಯಲ್ಲಿ ಅಲ್ಲಿ ತುರುಪಟ್ಟಿಯಲಿ ಇಲ್ಲಿ ಕಿರುಗುಡಿಸಲಲಿ ।
ದೇಶದೇಶದಿ ವೇಷವೇಷಾಂತರವನಾಂತು ವಿಶ್ವಸಾರಥಿಯಾಗಿ ಲೀಲಾರಥವನೆಂತು
ಚೋದಿಸಿರುವೆಯೊ ಅಂತೆ ಸೃಷ್ಟಿಲೋಲ, ಚೋದಿಸಿರುವೆಯೊ ಅಂತೆ ಸೃಷ್ಟಿಲೋಲ ।
ಅವತರಿಸು ಬಾ, ಅವತರಿಸು ಬಾ ಇಲ್ಲಿ ಇಂದೆನ್ನ ಚೈತ್ಯದಲಿ ಹೇ ದಿವ್ಯ ಸಚ್ಚಿದಾನಂದಶೀಲ ॥೨॥

॥೨೭॥

## ॥ ನನ್ನ ದೇಹದ ಬೂದಿ ॥ – ದಿನಕರ ದೇಸಾಯಿ

ನನ್ನ ದೇಹದ ಬೂದಿ – ಗಾಳಿಯಲಿ ತೂರಿ ಬಿಡಿ, ಹೋಗಿ ಬೀಳಲಿ ಭತ್ತ ಬೆಳೆಯುವಲ್ಲಿ ।
ಬೂದಿ–ಗೊಬ್ಬರದಿಂದ ತೆನೆಯೊಂದು ನೆಗೆದು ಬರೆ, ಧನ್ಯವಾಯಿತು ಹುಟ್ಟು ಸಾವಿನಲ್ಲಿ ॥೧॥

ನನ್ನ ದೇಹದ ಬೂದಿ – ಹೊಳೆಯಲ್ಲಿ ಹರಿಯಬಿಡಿ, ತೇಲಿ ಬೀಳಲಿ ಮೀನು ಹಿಡಿಯುವಲ್ಲಿ ।
ಮುಷ್ಟಿಬೂದಿಯ ತಿಂದು ಪುಷ್ಟವಾಗಲು ಮೀನು, ಧನ್ಯವಾಯಿತು ಹುಟ್ಟು ಸಾವಿನಲ್ಲಿ ॥೨॥

ನನ್ನ ದೇಹದ ಬೂದಿ – ಕೊಳದಲ್ಲಿ ಬೀರಿ ಬಿಡಿ, ತಾವರೆಯು ದಿನದಿನವು ಅರಳುವಲ್ಲಿ ।
ಬೂದಿ ಕೆಸರನು ಕೂಡಿ ಹೊಸ ಪಂಕಜವು ಮೂಡೆ, ಧನ್ಯವಾಯಿತು ಹುಟ್ಟು ಸಾವಿನಲ್ಲಿ ॥೩॥

ಸತ್ತ ಮೇಲಾದರೂ ದೇಹ ಸೇವೆಗೆ ನಿಲಲಿ, ಇಂದಿಗೀ ನರಜನ್ಮ ಸೇವೆಯೆಂದು ।
ತನ್ನ ಸ್ವಾರ್ಥವ ನೆನೆದು ವ್ಯರ್ಥವಾಗಿದೆ ಜೀವ, ನಿಜಸೇವೆಗೈಯಲಿಕೆ ಬರಲಿ ಮುಂದು ॥೪॥

॥೨೮॥

## ॥ ಹರಿಗೆ ಎಂದು ಗುಡಿಯನೊಂದ ॥ – ದಿನಕರ ದೇಸಾಯಿ

ಹರಿಗೆ ಎಂದು ಗುಡಿಯನೊಂದ ಕಟ್ಟುತಿರುವೆಯಾ ।
ಹರಿಯ ಒಲುಮೆ ಪಡೆದು ಪುಣ್ಯ ಗಳಿಸುತಿರುವೆಯಾ ॥

ಹುಚ್ಚ ನೀನು ಹಳ್ಳಿಗೋಡು, ದೀನ ಜನರ ಪಾಡ ನೋಡು ।
ಇರಲು ಗುಡಿಯು ಇಲ್ಲವಲ್ಲ, ಹೊಟ್ಟೆ ತುಂಬ ಅನ್ನವಿಲ್ಲ ॥೧॥

ದೀನಗೊಂದು ಗೂಡು ಸಾಕು, ದೇವಗೊಂದು ವಿಶ್ವ ಬೇಕು ।
ಮಣ್ಣ ಹುಲ್ಲ ಸಣ್ಣ ಗೂಡು, ಬಡವಗದುವೆ ಸಿರಿಯ ಬೀಡು ॥೨॥

ಜಗಕೆ ಗೋಡೆ ಹಾಕಿ ಗುಡಿಯ ಕಟ್ಟಬಲ್ಲೆಯಾ, ಹರಿಯ ವಿಶ್ವರೂಪವನ್ನು ಮರೆತುಬಿಟ್ಟೆಯಾ ।
ದೀನಗಿಂತ ದೇವ ಬಡವನೆಂದು ಬಗೆದೆಯಾ, ಹರಿಗೆ ಎಂದು ಗುಡಿಯನೊಂದ ಕಟ್ಟುತಿರುವೆಯಾ ॥೩॥

॥೨೯॥

## ॥ ಹರಿಗೆ ಎಂದು ಗುಡಿಯನೊಂದು ॥ – ಪು. ತಿ. ನರಸಿಂಹಾಚಾರ್ಯ

ಹರಿಗೆ ಎಂದು ಗುಡಿಯನೊಂದು ಕಟ್ಟುತಿರುವೆನು ।
ದೀನಗಿಂತ ದೇವ ಬಡವನೆಂದು ಬಗೆವೆನು ॥

ನಿಜವು ವಿಷ್ಣು ವಿಶ್ವಕರನು ವಿಶ್ವಧಾಮನು, ಒಂದೆ ಹೆಜ್ಜೆ ಇಟ್ಟು ಭುವಿಯ ನಾಕವಳೆದನು ।
ಬೆಳ್ಳಿಬೆಟ್ಟದೊಡೆಯ ಶಿವನು ಚಂದ್ರಮೌಳಿಯು, ಪ್ರೇಮಮೂರ್ತಿ ಗಿರಿಜೆ ಅವನ ಪ್ರಣಯಕಾಂತೆಯು ॥೧॥

ಆದರವನ ಬೀಡು ಮಸಣ, ಲೇಪ ಬೂದಿಯು, ಚರ್ಮ ಉಡುಗೆ, ಹಾವು ತೊಡುಗೆ, ಬದುಕು ಬಿಕ್ಕೆಯು ।
ದೀನಗೊಂದು ವಿಶ್ವ ಸಾಲದಾಸೆ ತಣಿಸಲು, ದೇವಗೆದೆಯ ಗುಡಿಯು ಸಾಕು ನಲಿದು ನಲಿಸಲು ॥೨॥

॥೩೦॥

## ॥ ನಿಲ್ಲಿಸದಿರು ವನಮಾಲಿ ॥ – ಪು. ತಿ. ನರಸಿಂಹಾಚಾರ್ಯ

ನಿಲ್ಲಿಸದಿರು ವನಮಾಲಿ ಕೊಳಲ ಗಾನವ ।
ನಿಲ್ಲಿಸೆ ನೀ ಕಳೆವುದೆಂತೊ ಭವಭೀತಿಯ ಕೇಶವ ॥

ಕ್ರೂರ ದೈವ ಬಲಿಗೆ ಎಂತು ಕಾಯುತಿಹುದು ದೂರ ನಿಂತು ।
ಅಂತೆ ನಮ್ಮ ತುತ್ತುಗೊಳ್ಳೆ ಹೊಂಚುತಿಹುದು ಭೀತಿಯಿಂತು ॥೧॥

ನೀರು ನಿಂತು ಕೊಳೆಯುವಂತೆ ನಮಗಹುದು ನೂರು ಚಿಂತೆ ।
ಕೊಳಲುಲುಹಿನ ನೆರೆಯು ನುಗ್ಗಿ ಜೀವ ಹರಿಯಲೆಂಥ ಸುಗ್ಗಿ ॥೨॥

ಭವದ ಮಾಯೆ ಅಡಗುವಂತೆ ಅಹಂಕಾರ ಕರಗುವಂತೆ ।
ನಿನ್ನ ಗಾನದನುರಾಗವು ಬದುಕ ತುಂಬಲನುಗಾಲವು ॥೩॥

॥೩೧॥

## ॥ ಹೃದಯವಿಹಾರಿ ಹರಿ ॥ – ಪು. ತಿ. ನರಸಿಂಹಾಚಾರ್ಯ

ಹೃದಯವಿಹಾರಿ ಹರಿ, ಅವನೇ ನನ್ನ ಐಸಿರಿ ।
ಅವನಿಂದೆಲ್ಲಾ ಸರಿ, ಅವನ ಹೊರತೆಲ್ಲಾ ಬರಿ ॥

ಉದಿಸುವ ರವಿ ಸವಿ, ಸೊದೆಗರೆವ ಇರುಳು ಸವಿ ।
ಹೃದಯದೊಳಗಿರೆ ಮಾಧವ, ಆ ಮಂದಹಾಸ ಛವಿ ॥೧॥

ಆನಂದ ಕೃಪಣ ಮತಿ, ಅರಿಯದವನ ಸ್ಥಿತಿ ।
ಬರಿ ಕೊರಗುವ ಚಿತ್ತಕೆ ಸ್ಮರಣೆಯೇ ರಸದ ಗತಿ ॥೨॥

॥೩೨॥

## ॥ ಮಣ್ಣ ತಿಂದು ಸಿಹಿ ಹಣ್ಣ ಕೊಡುವ ಮರ ॥ – ಎಚ್. ಎಸ್. ವೆಂಕಟೇಶಮೂರ್ತಿ

ಮಣ್ಣ ತಿಂದು ಸಿಹಿ ಹಣ್ಣ ಕೊಡುವ ಮರ ನೀಡಿ ನೀಡಿ ಮುಕ್ತ ।
ಬೇವ ಅಗಿವ ಸವಿಗಾನದ ಹಕ್ಕಿ ಹಾಡಿ ಮುಕ್ತ ಮುಕ್ತ ॥

ಹಸಿರ ತೋಳಿನಲಿ ಬೆಂಕಿಯ ಕೂಸ ಪೊರೆವುದು ತಾಯಿಯ ಹೃದಯ ।
ಮರೆಯುವುದುಂಟೆ ಮರೆಯಲಿ ನಿಂತೇ ಕಾಯುವ ಕರುಣಾಮಯಿಯ ॥೧॥

ತನ್ನಾವರಣವೆ ಸೆರೆಮನೆಯಾದರೆ ಜೀವಕೆ ಎಲ್ಲಿಯ ಮುಕ್ತಿ ।
ಬೆಳಕಿನ ಬಟ್ಟೆಯ ಬಿಚ್ಚುವ ಜ್ಯೋತಿಗೆ ಬಯಲೇ ಜೀವನ್ಮುಕ್ತಿ ॥೨॥

ಹೂ ಮುಖವಾಡದ ಇರಿಯುವ ಮುಳ್ಳೇ ಎಲ್ಲಿವರೆಗೆ ನಿನ್ನಾಟ ।
ಬೆಳಕಿನ ಕೂಸಿಗೆ ಕೆಂಡದ ಹಾಸಿಗೆ ಕಲಿಸಿದೆ ಜೀವನಪಾಠ ॥೩॥

ಇರುಳ ವಿರುದ್ಧ ಬೆಳಕಿನ ಯುದ್ಧ ಕೊನೆಯಿಲ್ಲದ ಕಾದಾಟ ।
ತಡೆಯೇ ಇಲ್ಲದೆ ನಡೆಯಲೆ ಬೇಕು ಸೋಲಿಲ್ಲದ ಹೋರಾಟ ॥೪॥

॥೩೩॥

## ॥ ಏಕಾದಶಿ ಉಪ್‌ವಾಸ ॥ – ರಾಜಾರಾಂ

ಆಚೆ ಮನೆ ಸುಬ್ಬಮ್ಮನೋರ್ದು ಏಕಾದಶಿ ಉಪ್‌ವಾಸ ।
ಎಲ್ಲೋ ಸ್ವಲ್ಪ ತಿಂತಾರಂತೆ ಅವ್‌ಲಕ್ಕಿ ಉಪ್ಪಿಟ್ಟು ಪಾಯ್‌ಸ ॥

ಮೂರೋ ನಾಲ್ಕೋ ಬಾಳೆಹಣ್ಣು ಸ್ವಲ್ಪ ಚಕ್‌ಲಿ ಕೋಡ್‌ಬಳೆ ।
ಗಂಟೆಗೆರಡು ಕಿತ್‌ಲೆಹಣ್ಣು ಆಗಾಗೊಂದು ಸೀಬೆಹಣ್ಣು ॥೧॥

ಮಧ್ಯಾಹ್ನವೆಲ್ಲಾ ರವೆ ಉಂಡೆ ಉರುಳೀಕಾಳಿನ್ ಉಸ್ಲಿ ।
ಒಂದೊಂದ್‌ಸಲ ಬಿಸ್‌ಬಿಸಿ ಸಂಡ್‌ಗೆ ಒಂದೋ ಎರಡೋ ಇಡ್ಲಿ ॥೨॥

ರಾತ್ರಿ ಪಾಪ ಉಪ್ಪಿಟ್ಟೇನೇ ಲೋಟದ್ ತುಂಬಾ ಹಾಲು ।
ಪಕ್ಕದ್ಮನೆ ರಾಮೇ ಗೌಡ್ರ ಸೀಮೆ ಹಸುವಿನ್ ಹಾಲು ॥೩॥

||೩೪||

## || ವನಸುಮದೊಳೆನ್ನ ಜೀವನವು || – ಡಿ. ವಿ. ಗುಂಡಪ್ಪ

ವನಸುಮದೊಳೆನ್ನ ಜೀವನವು ವಿಕಸಿಸುವಂತೆ ಮನವನನುಗೊಳಿಸು ಗುರುವೇ, ಹೇ ದೇವ ||

ಕಾನನದಿ ಮಲ್ಲಿಗೆಯು ಮೌನದಿಂದಿದ್ದು ನಿಜಸೌರಭವ ಸೂಸಿ ನಲವಿಂ ।
ತಾನೆಲೆಯ ಮಿಂತಿರ್ದು ದೀನತೆಯ ತೋರಿ ಅಭಿಮಾನವನು ತೊರೆದು ಕೃತಕೃತ್ಯತೆಯ ಪಡೆವಂತೆ ||೧||

ಉಪಕಾರಿ ನಾನು ಎನ್ನುಪಕೃತಿಯು ಜಗಕೆಂಬ ವಿಪರೀತ ಮತಿಯನಳಿದು ।
ವಿಫುಲಾಶ್ರಯವನೀವ ಸುಫಲ ಸುಮಭರಿತ ಪಾದಪದಂತೆ ನೈಜಮಾದೊಳ್ವಿನಿಂ ಬಾಳ್ವವೊಲು ||೨||

||೩೫||

## || ಏನೀ ಮಹಾನಂದವೆ || – ಡಿ. ವಿ. ಗುಂಡಪ್ಪ

ಏನೀ ಮಹಾನಂದವೆ, ಓ ಭಾಮಿನೀ, ಏನೀ ಸಂಭ್ರಮದಂದವೆ ಬಲು ಚೆಂದವೆ ।
ಏನೀ ವೃತ್ತಾಮೋದ ಏನೀ ಮೌರಜನಾದ ಏನೀ ಜೀವೋನ್ಮಾದ ಏನೀ ವಿನೋದ ||

ಢಕ್ಕೆಯ ಶಿರ ಕೆತ್ತಿ ತಾಳಗೊಳಿಂ ತಟ್ಟಿ ತಕಿಟ ಧಿಮಿಕಿಟ ತಕಝುಣುರೆನ್ನಿಸಿ ।
ಕುಕ್ಕುತೆ ಚರಣವ ಕುಲುಕುತೆ ಕಾಯವ ಸೊಕ್ಕಿದ ಕುಣಿತವ ಕುಣಿವೆ ನೀನೆಲೆ ಬಾಲೆ ||೧||

ಆರು ನಿನ್ನಯ ಹೃದಾಗಾರದಿ ನರ್ತಿಸಿ ಮಾರಶೂರತೆಯ ಪ್ರಸಾರಿಸುತಿರ್ಪನ್ ।
ಸ್ಮೇರವದನ ನಮ್ಮ ಚೆನ್ನಕೇಶವರಾಯ ಓರೆಗಣ್ಣಿಂ ಸನ್ನೆ ತೋರುತಲಿಹನೇನೆ ||೨||

## <u>ಬಗೆಬಗೆಯ ನಗು</u>

೧. ತನ್ನೊಳಗೆ ನಗುವವನು – ಜ್ಞಾನಿ.
೨. ತನಗೆ ತಾನೇ ನಗುವವನು – ಹುಚ್ಚ.
೩. ಮನೋರಂಜನೆಗಾಗಿ ನಗುವವನು – ವಿದೂಷಕ.
೪. ಮೈಮರೆತು ನಗುವವನು – ರಸಿಕ.
೫. ಗೆಳತಿಯನ್ನು ನೆನೆದು ನಗುವವನು – ಪ್ರೇಮಿ.
೬. ಇನ್ನೊಬ್ಬರನ್ನು ನೋಡಿ ನಗುವವನು – ಗರ್ವಿ.
೭. ಇನ್ನೊಬ್ಬರಿಗಾಗಿ ನಗುವವನು – ಅಯೋಗ್ಯ.
೮. ಇನ್ನೊಬ್ಬರನ್ನು ನೋಯಿಸಿ ನಗುವವನು – ಖಳ.
೯. ನಗುತ್ತಲೇ ವಿಜಯಿಯಾಗುವವನು – ಬುದ್ಧಿವಂತ.
೧೦. ಗೆದ್ದರೂ ನಗದವನು – ಕರ್ಮಯೋಗಿ.

### ಈ ಹತ್ತರಲ್ಲಿ ನೀನ್ಯಾರು?